ಮಾಡೋಣ, after two days ಇದನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು ಎಂಬುದು ನನ್ನ ಅನಿಸಿಕೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರ ಛೇಂಬರ್‌ನಲ್ಲಿ ಮಾತನಾಡಿದ್ದೇವೆ. ಚರ್ಚೆ ಮಾಡುವುದರಿಂದ ಯಾವುದೇ ಪ್ರಚೋದನೆಗಳು ಆಗುವುದಿಲ್ಲ. ಚರ್ಚೆ ಮಾಡುವುದು ಶಾಂತಿ ನೆಲೆಸಲಿ ಎನ್ನುವ ಕಾಳಜಿಣಕ್ಕೋಸ್ಕರ. ಪರಿಹಾರ ಸಿಗಬೇಕೆನ್ನುವ ಕಾರಣಕ್ಕೋಸ್ಕರ. ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದು ಇಡೀ ರಾಜ್ಯಕ್ಕೆ ಗೊತ್ತಾಗಬೇಕು. ಆ ಕಾರಣದಿಂದ ಚರ್ಚೆಯಿಂದ ಯಾವುದೇ ಪ್ರಚೋದನೆಗಳು ಆಗುವುದಿಲ್ಲ. ನಾಳೆ ಪ್ರಶ್ನೋತ್ತರ ಅವದಿ ಮುಗಿದ ಮೇಲೆ ಈ ವಿಷಯವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ. ಮೊದಲನೇ ಪ್ರಶ್ನೆ ಸಿದ್ದು ಸವದಿ ಅವರು.

ಅ. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿಸಿ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ.

1 (142) ಶ್ರೀ ಸಿದ್ದುಸವದಿ (ತೇರದಾಳ್)

ಶ್ರೀ ಬಿ.ಶ್ರೀರಾಮುಲು. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು;

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಕೈಗೊಂಡ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ. ಈ ಕಾರ್ಯಕ್ರಮಗಳು ಪ್ರತಿಶತಃ ಅನುಷ್ಠಾನವಾದದ್ದು ಎಷ್ಟು;

ಪ್ರತಿಶತಃ 33.50 ಪ್ರಗತಿಯು ಏಪ್ರಿಲ್ 2009 ರಿಂದ ಮೇ 2009ರವರೆಗೆ ಆಗಿರುತ್ತವೆ.

ಇ. ಹಾಗಿದ್ದಲ್ಲಿ. ತೇರದಾಳ್ ಮತಕ್ಷೇತ್ರದಲ್ಲಿ ಈ ಕಾರ್ಯಕ್ರಮಗಳು ಅನುಷ್ಠಾನವಾಗಿರುತ್ತದೆಯೇ; ಹಾಗಿದ್ದಲ್ಲಿ, ಅವು ಯಾವುವು;

ತೇರದಾಳ ಮತಕ್ಷೇತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಗತಗೊಳಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳು, ಫಲಾನುಭವಿಗಳ ಸಂಖ್ಯೆ ಇತ್ಯಾದಿ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.

ಈ. ಅವುಗಳ ಸಂಖ್ಯೆ ಮತ್ತು ಫಲಾನುಭವಿಗಳ ವಿವರ ನೀಡುವುದು?

ಅನುಬಂಧ-1

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2009-10ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು (ರಾಜ್ಯ ವಲಯ)

(ಲಕ್ಷರೂ.ಗಳಲ್ಲಿ)

ಕ್ರ ಸಂ	ಲೆಕ್ಕಶೀರ್ಷಿಕೆ	2009-10 ಸಾಲಿನ ನಿಗಧಿ	ಮೇ 2009ರ ವರೆಗಿನ ಸಾಧನೆ	%
1	2	3	4	5
1	2210-01-110-2-21 ಆರೋಗ್ಯ ಇಲಾಖೆ ಕಟ್ಟಡಗಳು		–	–
2	2210-01-110-1-22 ಮನೋರೋಗ ಚಿಕಿತ್ಸಾಲಯಗಳು, ಸಾಂ.ರೋ.ಟಿ.ಬಿ. ಪ್ರಧಾನ ಮತ್ತು ಜಿಲ್ಲಾ ಆಸ್ಪತ್ರೆಗಳು.	600.49	91.00	15.15
3	2210-01-110-2-16 ಬೆಂಗಳೂರು ಅಪಘಾತಗಳ ಪುನರ್ವಸತಿ ಮತ್ತು ಇತರೆ ಸೇವೆಗಳು	250.00		–
4	2210-01-110-2-31 ಹೊರಮೈ ಅರ್ಬುದ ಪುನರ್ವಸತಿ ಮತ್ತು ಇತರ ಸೇವೆಗಳು	12.10	–	–
5	2210-01-100-2-37 ರಾಜೀವ್ ಗಾಂಧಿ ಅತಿ ವಿಶಿಷ್ಟ ಆಸ್ಪತ್ರೆ	56.00	–	–
6	2210-01-110-2-39 ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ರಾಜ್ಯ ಪಾಲು	5785.77	805.07	13.91
7	2210-01-110-2-10 ಟೆಲಿ ಮೆಡಿಸಿನ್ ಯೋಜನೆ-ಹಂತ 2	100.00	–	–
8	2210-01-110-2-41 ವೃದ್ಯಾಪ್ಯ ಆರೋಗ್ಯ ಸೇವೆಗಳು	110.00	–	–
9	2210-01-110-2-80 ಸೆಕೆಂಡರಿ ಮಟ್ಟದ ಅಸ್ಪತ್ರೆಗಳು (ಕೆ.ಎಫ್.ಡಬ್ಲ್ಯೂ)	100.02	9.01	9.01

10	2210–03–110–0–07 ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ ಮೇಲ್ದರ್ಜೆಗೇರಿಸಲಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಲಕರಣೆಗಳ ಖರೀದಿ	1530.00	–	–
11	2210–06–001–0–01 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ	6.80	0.21	3.09
12	2210–06–003–0–03 ಆರೋಗ್ಯ ಕುಟುಂಬ ಕಲ್ಯಾಣ ತರಬೇತಿ ಕೇಂದ್ರ	10.00	–	–
13	2210–06–101–0–06 ಮಾನಸಿಕ ಆರೋಗ್ಯ ಮಲೇರಿಯಾ, ಕರ್ನಾಟಕ ಫೈಲೇರಿಯಾ ನಿಯಂತ್ರಣ	7.00	0.80	11.43
14	2210–06–101–7–15 ಕರ್ನಾಟಕ ರಾಜ್ಯ ಏಡ್ಸ್ ನಿವಾರಣಾ ಸಂಘ	50.00	–	–
15	2210–06–101–8–03 ಅಂಧತ್ವ ನಿಯಂತ್ರಣ ಕಾರ್ಯಕ್ರಮ	1.10	1.08	98.18
16	2210–06–800–0–12 ರಕ್ತ ಹಿಮೋಫೀಲಯಾ ರೋಗಗಳಿಗೆ ಬೆಂಬಲ	15.00	–	–
17	2210–80–800–0–20 ವೈದಕೀಯ ವೆಚ್ಚ ಮರುಪಾವತಿ	12.00	–	–
18	2210–06–800–0–81 ಕೆ.ಹೆಚ್.ಎಸ್.ಡಿ.ಆರ್.ಪಿ.ಸಾಂಸ್ಥಿಕ ಅಭಿವೃದ್ಧಿ	488.00	–	–
19	2210–06–800–0–82 ಕೆ.ಹೆಚ್.ಎಸ್.ಡಿ.ಆರ್.ಪಿ.ಸಾರ್ವಜನಿಕ ಆರೋಗ್ಯ ಸ್ವರ್ದಾ ನಿಧಿ.	1560.00	0.83	0.05
20	2210–06–800–8–83 ಕೆ.ಹೆಚ್.ಎಸ್.ಡಿ.ಆರ್.ಪಿ ಆರೋಗ್ಯ ಹಣಕಾಸು	766.00	–	–
21	2210–03–800–0–84 ಕೆ.ಹೆಚ್.ಡಿ.ಆರ್.ಪಿ ಯೋಜನಾ	1596.19	147.59	9.25

	ನಿರ್ವಹಣೆ ಮತ್ತು ಮೌಲ್ಯಮಾಪನ			
22	2210-06-800-0-85 ಕೆ.ಹೆಚ್.ಎಸ್.ಡಿ.ಆರ್.ಪಿ ಸುಧಾರಣಾ ಸವಾಲು ನಿಧಿ	1845.00	–	–
23	4210-01-110-1-01 ಕಟ್ಟಡಗಳು	1445.00	–	–
24	4210-01-110-1-03 ಪ್ರಾ.ಆ. ಕೇಂದ್ರ/ಸಾಕೇಂದ್ರ/ಸಾರ್ವಜನಿಕ ಆಸ್ಪತ್ರೆಗಳ ಉನ್ನತೀಕರಣ ನಿರ್ಮಾಣ	2841.10	–	–
25	4210-01-110-1-06 ಬೆಂಗಳೂರಿನಲ್ಲಿ ಸಾರ್ವಜನಿಕ ಆಸ್ಪತ್ರೆ ಸ್ಥಾಪನೆ (ಪ್ರಧಾನ ಕಾಮಗಾರಿಗಳು)	500.00	–	–
26	4210-01-110-1-84 ಸೆಕೆಂಡರಿ ಮಟ್ಟದ ಆಸ್ಪತ್ರೆಗಳು	2150.00	–	–
27	4210-01-110-1-87 ಕೆ.ಹೆಚ್.ಡಿ.ಆರ್.ಪಿ ಸೇವಾ-ಸುಧಾರಣಾ ಸವಾಲು ನಿಧಿ	5534.00	–	–
28	4210-01-110-7-01 ಜಿಲ್ಲಾ ಪಂಚಾಯತಿಗಳಿಗೆ ಬಂಡವಾಳ ಬಿಡುಗಡೆ (ಪ್ರಾ.ಆ.ಕೇಂದ್ರಗಳು)	201.00	–	–
29	4210-01-110-7-02 ತಾಲ್ಲೂಕು ಪಂಚಾಯತಿಗಳಿಗೆ ಬಂಡವಾಳ ಬಿಡುಗಡೆ	201.00	–	–
30	2210-06-800-0-15 ಸುವರ್ಣ ಸುರಕ್ಷಾ ವಿಮಾ ಯೋಜನೆ (ಆಪದ್ಬಾಂದವ)	2000.00	–	–
31	2210-80-800-0-16 ಸುಟ್ಟಗಾಯ ಮತ್ತು ಡಯಾಲಿಸಿಸ್ ವಾರ್ಡ್ ಪ್ರಾರಂಭ	2336.00	–	–
32	4210-01-110-1-07 ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಉನ್ನತೀಕರಣ ಪಿಅಕಾ	2946.00	–	–

33	2210-80-800-0-17 ಸಮಗ್ರ ಮಾತೃ ಆರೋಗ್ಯ ಪಾಲನೆ (ತಾಯಿ ಭಾಗ್ಯ)	1000.00	–	–
34	2210-80-800-0-18 ಇ.ಎಂ.ಆರ್.ಐ ಸ್ಥಾಪನೆ (ಆರೋಗ್ಯ ಕವಚ)	1000.00	–	–
35	4210-01-200-1-02 ಆರೋಗ್ಯ ಭವನ ನಿರ್ಮಾಣ	100.00	–	–
36	2210-01-800-0-06 ಆರೋಗ್ಯ ಸೇವೆಗಳ ಉನ್ನತೀಕರಣಕ್ಕಾಗಿ 12ನೇ ಆರ್ಥಿಕ ಆಯೋಗದ ಅನುದಾನಗಳು	3750.00	–	–
37	4210-01-110-1-86 ಕೆ.ಹೆಚ್.ಡಿ.ಆರ್.ಪಿ (ಯೋಜನಾ)	961.00	1.77	0.18
38	4210-01-110-1-08 ಜಿಲ್ಲಾ ಆಸ್ಪತ್ರೆಗಳು-ಗುಲ್ಬರ್ಗಾ ಮತ್ತು ಚಾಮರಾಜನಗರ	1600.00	–	–
39	4210-01-110-1-09 ತಾಲ್ಲೂಕು ಆಸ್ಪತ್ರೆಗಳು-ಪ್ರಥಮ ರೆಫರಲ್ ಘಟಕಗಳನ್ನಾಗಿ ಉನ್ನತೀಕರಿಸುವ ಕಾಮಗಾರಿಗಳು	891.00	–	–
40	2210-06-101-1-03 ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮ (ನಗರ)	100.00	–	–
41	2210-06-101-7-06 ಗಿನಿಯ ಜಂತು ನಿರ್ಮೂಲನ ಕಾರ್ಯಕ್ರಮ	8.00	0.88	11.00
42	2210-06-101-7-14 ಸಮಗ್ರ ರೋಗಗಳ ಪರಿವೀಕ್ಷಣಾ ಕಾರ್ಯಕ್ರಮ	66.00	0.54	0.82
43	2210-06-101-7-10 ರಾಷ್ಟ್ರೀಯ ಅಯೋಡಿನ್ ಕೊರತೆ ನಿಯಂತ್ರಣ ಕಾರ್ಯಕ್ರಮ	21.01	3.23	15.37
44	2210-06-101-8-01 ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ	19.01	0.73	3.84
45	2210-06-101-8-04 ಕರ್ನಾಟಕ	450.00	–	–

	ರಾಜ್ಯ ಅಂಧತ್ವ ನಿಯಂತ್ರಣ ಸಂಘ			

ಜಿಲ್ಲಾ ವಲಯ

ಸಂ ಕ್ರ	ಲೆಕ್ಕಶೀರ್ಷಿಕೆ	2009–10 ಸಾಲಿನ ನಿಗಧಿ	ಮೇ 2009ರ ವರೆಗಿನ ಸಾಧನೆ	%
1	ನಗರ ಆರೋಗ್ಯ ಸೇವಾ ಯೋಜನೆಗಳು 2210–01–110–2–34	254.05	27.10	10.67
2	ಆರೋಗ್ಯ ಇಲಾಖೆಯ ಕಟ್ಟಡಗಳು 2210–03–101–0–73	653.24	–	–
3	ಪ್ರಾಥಮಿಕ ಆರೋಗ್ಯ ಕೇಂದ್ರಗಳು 2210–03–103–0–72	6.50	–	–
4	ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ (ಸಾ.ಆ.ಕೇಂದ್ರ) 2210–03–103–0–73	268.55	–	–
5	ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳು 2210–03–110–0–01	110.35	–	–
6	ಆರ್.ಐ.ಡಿ.ಎಫ್ ಕಾಮಗಾರಿಗಳು 2210–03–110–0–06	1731.68	–	–
7	ಅಂಬುಲೆನ್ಸ್‌ಗಳ ವ್ಯವಸ್ಥೆ 2210–03–110–0–51	48.26	–	–
8	ರಕ್ತ ನಿಧಿ ಸ್ಥಾಪನೆ 2210.03–110.0.52	2.50	–	–
9	ರಾಷ್ಟ್ರೀಯ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮ 2210–03–110–0–54	120.62	15.48	12.83
10	ಸಂಚಾರಿ ಆರೋಗ್ಯ ಘಟಕ 2210–03–110–0–55	29.79	–	–
11	ತಾಲ್ಲೂಕು ಆಸ್ಪತ್ರೆಗಳಿಗೆ ಕ್ಷಕಿರಣ ಸೌಲಭ್ಯಗಳು 2210–03–110–0–72	45.66	–	–
12	ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆ 2210–03–100–0–73	2704.18	321.34	11.88
13	ಆಸ್ಪತ್ರೆ ಸಲಕರಣೆಗಳ ದುರಸ್ಥಿ 2210–03–800–0–52	164.71	–	–

14	ರಾಷ್ಟ್ರೀಯ ಮಲೇರಿಯಾ ನಿರೋಧ ಕಾರ್ಯಕ್ರಮ (ಗ್ರಾ) 2210-06-101-1-02	2321.57	230.80	9.94
15	ಮಾನಸಿಕ ಆರೋಗ್ಯ ಯೋಜನೆಗಳು ಹಾಗೂ ರಾ. ಮಲೇರೀಯ, ಕಾಲರಾ, ನಿಯಂತ್ರಣ ಕಾರ್ಯಕ್ರಮಗಳು ಮತ್ತು ಕೆ.ಎಫ್.ಡಿ.	116.86	8.58	7.34
16	ರೋಗಗಳ ನಿವಾರಣೆ ಮತ್ತು ನಿಯಂತ್ರಣ 2210-06-101-1-51	226.44	9.23	4.08
17	ಜಿಲ್ಲಾ ಆರೋಗ್ಯ ಕಛೇರಿ ಕಟ್ಟಡಗಳು 4210-02-103-1-03	190.23	–	–
18	ಪ್ರಾ.ಆ.ಘಟಕಗಳ ಬಲವರ್ಧನೆ-ಪ್ರಸೂತಿ ಗೃಹಗಳು 2210-03-101-0-71	194.97	16.66	8.51
19	ಉಪ ಕೇಂದ್ರಗಳ ಸ್ಥಾಪನೆ (ಎಂ.ಎ.ಪಿ) 2210-03-101-0-72	73.71	3.99	5.41
20	ಶಾಲಾ ಆರೋಗ್ಯ ಸೇವೆಗಳು 2210-03-800-0-54	16.28	–	–
21	ಸಾಮಗ್ರಿಗಳು ಮತ್ತು ಸರಬರಾಜು 2210-03-800-0-58	282.86	–	–
22	ರಾಷ್ಟ್ರೀಯ ಪಿಲೇರಿಯಾ ನಿಯಂತ್ರಣ ಕಾರ್ಯಕ್ರಮ (ಸಿ.ಎಸ್.ಎಸ್) 2210-06-101-6-01-02	0.50	–	–
23	ದೃಷ್ಟಿದೋಷ, ಅಂಧತ್ವ, ಟ್ರಾಕೋಮಾ ನಿವಾರಣಾ ಮತ್ತು ನಿಯಂತ್ರಣದ ರಾಷ್ಟ್ರೀಯ ಕಾರ್ಯಕ್ರಮ (ಸಿ.ಎಸ್.ಎಸ್.) 2210-06-101-8-01	120.51	7.63	6.33
24	ಬುಡಕಟ್ಟು ಸಮೂಹಗಳಿಗೆ ಆರೋಗ್ಯ ಪಾಲನಾ ಸೌಲಭ್ಯಗಳು (ಸಿ.ಎಸ್.ಎಸ್) 2210-03-800-0-14	17.79	0.42	2.36

ಒಟ್ಟು ಶೇಕಡ ಪ್ರಗತಿ : 33.50

HIV/AIDS Report

ಕ್ರ.ಸಂ.	ಆರೋಗ್ಯ ಸಂಸ್ಥೆಯ ಹೆಸರು	ಒಟ್ಟು ತಪಾಸಣೆ	ಪತ್ತೆ ಹಚ್ಚಿದ್ದು
1	ಮಹಾಲಿಂಗಪೂರ	425	48

2	ರಬಕವಿ ಬನಹಟ್ಟಿ	833	69

ಕುಟುಂಬ ಕಲ್ಯಾಣ ಕಾರ್ಯಕ್ರಮಗಳು

ಕ್ರ.ಸಂ.	ಕಾರ್ಯಕ್ರಮ ಹೆಸರು	ಪುರುಷ	ಮಹಿಳೆ	ಒಟ್ಟು	ಪ್ರತಿ ಶತ
1	ಸಂತಾನಹರಣ ಶಸ್ತ್ರ ಚಿಕಿತ್ಸೆ	–	611	611	27.45%
2	ವಂಕಿದಾರಣಿ	–	–	351	26.96%
3	ನಿರೋಧ ಬಳಕೆ	–	–	2856	124.53%
4	ನುಂಗುವ ಮಾತ್ರೆ	–	–	976	86.14%

ಲೆಸಿಕಾ ಕಾರ್ಯಕ್ರಮ

ಕ್ರ.ಸಂ.	ಲೆಸಿಕಾ ಕಾರ್ಯಕ್ರಮ	ಒಟ್ಟು	ಪ್ರತಿ ಶತ
1	ಲೆಸಿಕಾ ಕಾರ್ಯಕ್ರಮ	1449	
	ಡಿ.ಪಿ.ಟಿ	1411	
	ಪೋಲಿಯೋ	1488	
	ಬಿ.ಸಿ.ಜಿ	1315	
	ಧಡಾರಾ	1315	
	ಹೆಪಟ್ಟಯಸ್ ಬಿ	1100	
	ಗರ್ಭಿಣಿ ತಾಯಂದಿರಿಗೆ ಟಿಟಿ ನೀಡಿದ್ದು	1511	
2	ಶಾಲಾ ಆರೋಗ್ಯ ಕಾರ್ಯಕ್ರಮವು ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ	01-8-2009 ರಿಂದ ಪ್ರಾರಂಭವಾಗಿದೆ	
3	ಎ.ಅನ್ನಾಂಗ ಕಾರ್ಯಕ್ರಮ	15-7-2009 ರಿಂದ ಪ್ರಾರಂಭವಾಗಿದೆ.	

ಅನುಬಂಧ–2

ತೇರವಾಳ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಾಹಿತಿ

ಕ್ರ ಸಂ	ಪ್ರಾ.ಆ.ಕೇಂದ್ರದ ಹೆಸರು	ಆರೋಗ್ಯ ಮತ್ತು ಕುಟುಂಬ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು							
		ಜೆ.ಎಸ್.ವೈ		ತಾಯಿ ಭಾಗ್ಯ		ಪ್ರಸೂತಿ ಆರೈಕೆ		ಮಡಿಲು
		ಜೆ.ಎಸ್.ವೈ ಫಲಾನುಭವಿಗಳು	ಮೊತ್ತ	ಜೆ.ಎಸ್.ವೈ ಫಲಾನುಭವಿಗಳು	ಮೊತ್ತ	ಜೆ.ಎಸ್.ವೈ ಫಲಾನುಭವಿಗಳು	ಮೊತ್ತ	ಫಲಾನುಭವಿಗಳು
	ತೇರದಾಳ							
	ಹಿಪ್ಪರಗಿ	153	112400			31	6200	31
	ಚಿಮ್ಮಡ	76	55200			98	196000	53
	ರಬಕವಿ–ಬನಹಟ್ಟಿ	7	4500	500	1500000	0	0	18
	ಮಹಾಲಿಂಗಪುರ	159	106600			60	120000	94
		93	69100			50	100000	50
	ಒಟ್ಟು	488	347800	500	1500000	239	487000	246

ಮಲೇರಿಯಾ ನಿಯಂತ್ರಣ ಕಾರ್ಯಕ್ರಮ

ಕ್ರಸಂ	ಆರೋಗ್ಯ ಸಂಸ್ಥೆಯ ಹೆಸರು	ರಕ್ತ ಲೇಪನ ಸಂಗ್ರಹ		ಖಚಿತ ಪ್ರಕರಣ		ಪ್ರತಿ ಶತ	ಡೆಂಗ್ಯೂ	ಚಿಕ್ಕೂನ್ ಗುನ್ಯ	ಫೈಲೆರಿಯಾ	ಮೆದುಳು ಜ್ವರ	ಕರಳು ಬೇನೆ
		ಗುರಿ	ಸಾಧನೆ	ಪಿ.ವಿ	ಪಿ.ಎಫ್						
1	ತೇರೆದಾಳ	3708	3881	–	–	105%	01	–	–	–	01
2	ಹಿಪ್ಪರಗಿ	1239	1636	–	–	132%	–	–	–	–	17
3	ಚಿಮ್ಮಡ	1032	1285	–	–	125%	–	–	–	–	01

ಕ್ಷಯ ರೋಗ ನಿಯಂತ್ರಣ

ಕ್ರಸಂ	ಆರೋಗ್ಯ ಸಂಸ್ಥೆಯಹೆಸರು	ಹೊಸ ರೋಗಪತ್ತೆ	ಪ್ರತಿ ಶತ
1	ಮಹಾಲಿಂಗಪೂರ	07	33.3%
2	ಚಿಮ್ಮಡ	03	12.00%
3	ತೇರದಾಳ	02	9.05%
4	ರವಿಕವಿ–ಬನಹಟ್ಟಿ	11	21.1%
2	ಹಿಪ್ಪರಗಿ	7	24.2%

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನೇನೋ ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರತಕ್ಕಂಥ ಉತ್ತರ ಅಪೂರ್ಣವಾಗಿದೆಯೆಂದು ನನಗನ್ನಿಸುತ್ತಿದೆ. ಏಕೆಂದರೆ ಸರ್ಕಾರದ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿಯನ್ನೇ ಇದರಲ್ಲಿ ಕೊಟ್ಟಿಲ್ಲ. ತಾಯಿ ಭಾಗ್ಯ ಶಿಶುಗಳ ಆರೈಕೆ, ಹೀಗೆ ಕೆಲವೊಂದಕ್ಕೆ ಸಂಬಂಧಪಟ್ಟಂತೆ ಅಂಕಿ ಸಂಖ್ಯೆಗಳನ್ನು ಇದರಲ್ಲಿ ಕೊಟ್ಟಿಲ್ಲ. ಅದೇ ರೀತಿ ಕೆಲವೊಂದು ಆಸ್ಪತ್ರೆಗಳ ಅಂಕಿ ಸಂಖ್ಯೆಗಳನ್ನೂ ಕೂಡ ಇದರಲ್ಲಿ ಕೊಟ್ಟಿಲ್ಲ. ಏಕೆ ಕೊಡಲಿಲ್ಲ? ಇದಲ್ಲದೇ ಪಟ್ಟಣ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚು ಇರತಕ್ಕಂಥ ಪ್ರದೇಶಗಳಲ್ಲಿ ಇರತಕ್ಕಂಥ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇದೆ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಹೇಳಬೇಕು. ಇದರ ಜೊತೆಗೆ ಸರ್ಕಾರದ ಹೊಸ ಹೊಸ ಎಲ್ಲಾ ಯೋಜನೆಗಳನ್ನು ಜಾರಿಗೆ ತರುವುದರ ಸಂಬಂಧ ಸರಿಯಾದ ಮಾಹಿತಿಗಳನ್ನು ಕೊಡದೇ ಇರುವುದಕ್ಕೆ ಕಾರಣವೇನು ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಲವೊಂದು ರಾಜ್ಯ ಸರ್ಕಾರದ ಯೋಜನೆಗಳು ಮತ್ತು ಕೆಲವೊಂದು ಕೇಂದ್ರ ಸರ್ಕಾರದ ಯೋಜನೆಗಳು ಇದ್ದು ರಾಜ್ಯ ವಲಯದಲ್ಲಿ 45% ಪ್ರಗತಿಯಾಗಿದೆ ಮತ್ತು ಜಿಲ್ಲಾ ಪಂಚಾಯತಿಯಲ್ಲಿ 24% ಪ್ರಗತಿಯಾಗಿದ್ದು ಒಟ್ಟಾರೆ 69% ಪ್ರಗತಿಯಾಗಿದೆ. ಮಾನ್ಯ ಸದಸ್ಯರು ಕೇವಲ ಏಪ್ರಿಲ್ ಮತ್ತು ಮೇ, ಈ ಎರಡು ತಿಂಗಳುಗಳಲ್ಲಿ ಎಷ್ಟು ಸಾಧನೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಶೇಕಡ 33 ರಷ್ಟು ಸಾಧನೆಯನ್ನು ನಾವು ಮಾಡಿದ್ದೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ದಿನೇಶ್ ಗುಂಡುರಾವ್ :– ಮಾನ್ಯ ಅಧ್ಯಕ್ಷರೆ, , ನನ್ನದೊಂದು ಉಪ ಪ್ರಶ್ನೆ ಇದೆ. ಇವರು ಏಪ್ರಿಲ್ ಮತ್ತು ಮೇ, ಕೇವಲ ಈ ಎರಡು ತಿಂಗಳುಗಳಲ್ಲಿ 33% ಪ್ರಗತಿ ಸಾಧಿಸಿದ್ದೇವೆಂದು ಹೇಳಿದ್ದಾರೆ. ಆದರೆ ಅವರು ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ಯಾವುದರಲ್ಲಿಯೂ ಕೂಡ ಸಾಧನೆಯಾಗಿಲ್ಲ. ಅವರು

ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನೋಡಿದರೆ ಬಹುಶಃ 8% ಕೂಡ ಸಾಧನೆಯಾಗಿಲ್ಲ. ಅದುದರಿಂದ ನೀವು ಈಗ ಹೇಳುತ್ತಿರತಕ್ಕಂಥದ್ದು ಮತ್ತು ನೀವು ಉತ್ತರದಲ್ಲಿ ಹೇಳಿರುವುದನ್ನು ನೋಡಿದರೆ ವ್ಯತ್ತಾಸ ಕಾಣುತ್ತಿದೆ. ತಾವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ. 33 % ಸಾಧನೆ ಆಗಿಯೇ ಇಲ್ಲ. ಮಾಹಿತಿಯನ್ನು ಕೊಟ್ಟಿರುವುದರಲ್ಲಿ ಒಂದು ಕಡೆ ಟಾರ್ಗೆಟ್ 6 ಕೋಟಿ ಇರುವ ಕಡೆ 9 ಲಕ್ಷ ತೋರಿಸಿದ್ದೀರಿ. 57 ಕೋಟಿ ರೂಪಾಯಿ ಟಾರ್ಗೆಟ್ ಇರುವ ಕಡೆ 1 ಕೋಟಿ ರೂ.ಗಳ ಪ್ರಗತಿ ಸಾಧನೆ ತೋರಿಸಿದ್ದೀರಿ. ಇದನ್ನು ನೋಡಿದರೆ ಕೇವಲ ಒಂದು ತಿಂಗಳಲ್ಲಿ 33 % ಸಾಧನೆಯನ್ನು ಹೇಗೆ ಮಾಡುವುದಕ್ಕೆ ಆಗುತ್ತದೆ? ಆದುದರಿಂದ ದಯವಿಟ್ಟು ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸದನಕ್ಕೆ ಮಾನ್ಯ ಸಚಿವರು ಕೊಡಬೇಕು. ಏಕೆಂದರೆ ಯಾವ ಹೆಡ್‌ನಲ್ಲಿಯೂ ಕೂಡ ನೀವು 33% ರೀಚ್ ಆಗಿಲ್ಲ.

ಶ್ರೀ ಬಿ.ಶ್ರೀರಾಮುಲು :– ಸಾಧನೆ ಪ್ರಗತಿ ಬಗ್ಗೆ ಅನುಬಂಧ 1 ಮತ್ತು 2 ರಲ್ಲಿ ಕೊಟ್ಟಿದ್ದೇವೆ.

ಶ್ರೀ ದಿನೇಶ್ ಗುಂಡುರಾವ್ :– ಮಾನ್ಯ ಅಧ್ಯಕ್ಷರೆ, ಇವರು ಹೇಳಿರುವ ಅನುಬಂಧ 1 ಮತ್ತು 2 ರಲ್ಲಿ ಇರುವುದನ್ನು ನೋಡಿದರೂ ಕೂಡ ಯಾವ ಹೆಡ್‌ನಲ್ಲಿಯೂ ಕೂಡ 10% ಪ್ರಗತಿ ಕೂಡ ಆಗಿಲ್ಲ. ಯಾವ ಹೆಡ್‌ನಲ್ಲಿಯೂ ಕೂಡ 10% ರೀಚ್ ಆಗಿಲ್ಲ. ಹೀಗಿರುವಾಗ ಇವರು ಹೇಗೆ ಒಟ್ಟಾರೆ 33% ಸಾಧನೆ ರೀಚ್ ಆಗಿದ್ದೇವೆ ಎಂದು ಹೇಳುತ್ತಾರೆ. ಮಾನ್ಯ ಸಚಿವರು ದಯವಿಟ್ಟು ಈ ಬಗ್ಗೆ ಸರಿಯಾದ ಸ್ಪಷ್ಟೀಕರಣವನ್ನು ಸದನಕ್ಕೆ ನೀಡಬೇಕು. ಸುಮಾರು ಹೆಡ್‌ನಲ್ಲಿ ಸೊನ್ನೆ ಪರ್ಸೆಂಟ್ ಸಾಧನೆಯಾಗಿದೆ. ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು :– ಮಾನ್ಯ ಸಚಿವರು ಈಗ ಉತ್ತರ ಹೇಳುತ್ತಾರೆ.

ಶ್ರೀ ಬಿ.ಶ್ರೀರಾಮುಲು :– ಮಾನ್ಯ ಅಧ್ಯಕ್ಷರೆ, ಎರಡು ತಿಂಗಳಲ್ಲಿ 33% ಪ್ರಗತಿ ಸಾಧಿಸಿದ್ದೇವೆಂದು ಏನು ನಾವು ಕೊಟ್ಟಿದ್ದೇವೆ ಅದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿ ಅಷ್ಟು ಪ್ರಗತಿಯಾಗಿಲ್ಲವೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಪ್ರತಿ ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನಾ ಸಭೆಯನ್ನು ಕರೆದು ರಾಜ್ಯ ವಲಯದಲ್ಲಿ ಎಷ್ಟು ಪ್ರಗತಿಯಾಗಿದೆ ಮತ್ತು ಕೇಂದ್ರ ವಲಯದಲ್ಲಿ ಎಷ್ಟು ಪ್ರಗತಿಯಾಗಿದೆ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಎಷ್ಟು ಪ್ರಗತಿಯಾಗಿದೆ ಎಂದು ನಾವು ನೋಡಬೇಕಾಗುತ್ತದೆ. ಏನಾದರೂ ಪ್ರಗತಿಯಾಗಿಲ್ಲವೆನ್ನುವುದು ಇದ್ದರೆ ..

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಸಚಿವರು ಒಂದು ನಿಮಿಷ ಗಮನಿಸಬೇಕು. ಮಾನ್ಯ ಸದಸ್ಯರು ಸದನದಲ್ಲಿ ಕೇಳಿರತಕ್ಕಂಥ ಪ್ರಶ್ನೆ ಸರಿಯಾಗಿಯೇ ಇದೆ. 2009–10 ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು ಏನೇನು? ಕಾರ್ಯಕ್ರಮಗಳ ಪ್ರತಿಶತ ಅನುಷ್ಠಾನ ಎಷ್ಟು ಎಂದು ಅವರು ಪ್ರಶ್ನೆ ಕೇಳಿದ್ದಾರೆ. 2009–10 ನೇ ಸಾಲಿನದ್ದು ಅವರು ಕೇಳಿದ್ದಾರೆಯೇ ವಿನಃ ಕೇವಲ ಎರಡು ತಿಂಗಳ ಪ್ರಗತಿಯ ಬಗ್ಗೆಯಲ್ಲ. 2009–10 ನೇ ಸಾಲಿನದ್ದನ್ನು ಕೊಡುವುದನ್ನು ಬಿಟ್ಟು ಕೇವಲ

ಎರಡು ತಿಂಗಳ ಪ್ರಗತಿಯನ್ನು ತಾವು ಕೊಡುತ್ತಿದ್ದೀರಿ. ಏಕೆ? ನಾನು ನಿಮ್ಮ ಮೇಲೆ ಆರೋಪವನ್ನು ಮಾಡುತ್ತಿಲ್ಲ. ಅಧಿಕಾರಿಗಳು ತಮಗೆ ದಾರಿ ತಪ್ಪಿಸುತ್ತಿದ್ದಾರೆ. ಈಗ ನಮಗೆ ನೀವು 2009–10 ನೇ ಸಾಲಿನಲ್ಲಿ ಏನು ಪ್ರಗತಿಯಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಡಿ. ಆಗ ಪ್ರಶ್ನೆಗೆ ಉತ್ತರ ಸರಿ ಬರುತ್ತದೆ.

ಶ್ರೀ ಬಿ.ಶ್ರೀರಾಮುಲು :– 2009–10ನೇ ಸಾಲಿನಲ್ಲಿ 125% ಆಗಿದೆ. 100% ಆಗ ಬೇಕಾಗಿತ್ತು. 125% ಆಗಿದೆ. ಏಕೆಂದರೆ ಕಳೆದ ಬಾರಿಯ closing balance ಏನಿತ್ತು ಅದನ್ನು opening balance ಎಂದು ತೆಗೆದುಕೊಂಡೆ ಕಾರಣ ಅದನ್ನು ಸೇರಿಸಿ ಕಳೆದ ಕಾಲಿನದ್ದನ್ನು ತೆಗೆದುಕೊಂಡ ಕಾರಣ 125% ಪ್ರಗತಿಯಾಗಿದೆ.

ಶ್ರೀ ದಿನೇಶ್ ಗುಂಡುರಾವ್ :– ಮಾನ್ಯ ಅಧ್ಯಕ್ಷರೆ, ಪ್ರಶ್ನೆಯಲ್ಲಿ ಮಾತ್ರ ಸ್ಪಷ್ಟತೆ ಕಂಡುಬರುತ್ತಿದೆ. ಆದರೆ ಮಾನ್ಯ ಸಚಿವರ ಉತ್ತರದಲ್ಲಿ ಸ್ಪಷ್ಟತೆ ಇಲ್ಲ. ಬಹುಶಃ ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಧಿಕಾರಿಗಳನ್ನು ಮತ್ತೊಮ್ಮೆ ಕೇಳಿ ಇದರ ಬಗ್ಗೆ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಬಿ.ಶ್ರೀರಾಮುಲು :– ಆಯಿತು ಸಾರ್. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು :– ಸಿದ್ದು ಸವದಿಯವರೆ, ಉಪ ಪ್ರಶ್ನೆ ಕೇಳುವುದು ಏನಾದರೂ ಇದ್ದರೆ ಕೇಳಿ.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎರಡು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಒಂದು ಮನವಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಮಂಜೂರಾತಿಯನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಶ್ರೀರಾಮುಲು :– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಅವರ ಮನವಿಯನ್ನು ನೋಡಿಯೇ ಅದಕ್ಕೆ ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಮುಂದೆ ಹೇಳಬೇಕಾಗುತ್ತದೆ.

ಮಂಡ್ಯ ವೈದ್ಯಕೀಯ ಕಾಲೇಜನ್ನು ಉನ್ನತೀಕರಿಸುವ ಬಗ್ಗೆ

2 (146) ಶ್ರೀ ಎಂ.ಶ್ರೀನಿವಾಸ್ (ಮಂಡ್ಯ)

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು)

(ಅ) ಮಂಡ್ಯ ವೈದ್ಯಕೀಯ ಕಾಲೇಜನ್ನು ಉನ್ನತೀಕರಿಸುವ ಪ್ರಾಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

(ಆ) ಹಾಗಿದ್ದಲ್ಲಿ ಯಾವಾಗ ಉನ್ನತೀಕರಿಸಲಾಗುವುದು;

ಉದ್ಭವಿಸುವುದಿಲ್ಲ

(ಇ) ಮಂಡ್ಯ ವೈದ್ಯಕೀಯ ಕಾಲೇಜಿಗೆ ಕಟ್ಟಡ ಹಾಗೂ ಮೂಲಬೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೊರತೆ ಇರುವುದಿಲ್ಲ